38.

ಡಿಸ್ಟ್ರಿಕ್ಟ್.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಕೇಳಿಕೊಂಡಿರುವ ಜಮೀನಿನ ವಿವರಣೆ.				ಷರಾ.
				ತರಹ.	ಸರ್ವೆ ನಂಬರ್.	ಬೀಜವರಿ.	ಕಂದಾಯ.	
ಹಾಸನ	ಹಾಸನ	ಹೊಸಗನ್ನೂರು	ತಿಮ್ಮೇಗೌಡ	ಖುಷ್ಕಿ	87ನೇ ಸರ್ವೇ ನಂಬರ್ ಬಿಟ್ಟ	6 ಗುಂಟೆಗಳು		ಈ ನಂಬರ್ ನಿಲ್ಲೇ ಅಲ್ಲಿ 7¼+1¼ ಸಪಲ್ಲಿ ಜಮೀನು ಕೊಳ್ಳಿ ಜಮೀನು ಕಾಗಿರುತ್ತೆ.

ನಂ. 203.—ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಆ|| ಅಸಿಸ್ಟೆಂಟ್ ಕಮ್ಮಿಷನರ್ ಮಿ|| ರಾಮಸ್ವಾಮಿ ಅಯ್ಯರ್ ಯವರಿಗೆ 1ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರವನ್ನು ಇದರಿಂದ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ಪೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಿ. ಪೋಜೀಬ್ ಹುಕ್ತುಂ,
ಆರ್. ವಿಜಯಿಂದ್ರರಾವ್,
ಚೀಫ್ ಸೆಕ್ರಿಟರಿ.

ದಿವಾನರವರು, ಅವರ ಭೇಟಿಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕ್ತುಂ ಬಿ. ಪೋಜೀಬ್,
ಕೆ. ದೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಿಟರಿ.

ವಿದ್ಯಾಭ್ಯಾಸದ ಇಲಾಖೆ.

1889ನೇ ಇಸವಿ ಫಿಬ್ರವರಿ ತಾರೀಖು 9.

ಮೈಸೂರು ದೇಶೀಯ ಪರೀಕ್ಷೆ.

ಯಡೆಹಳ್ಳಿ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್ ಮಿ|| ರಾ|| ಅಳಿಂಗಯ್ಯಂಗಾರ್‌ರವರಿಂದ ಈ ತಿಂಗಳಲ್ಲಿ ನಡೆಯುವ ಮೇಲ್ಕಂಡ ಪರೀಕ್ಷೆಯಲ್ಲಿ ಮೇಲುಕೋಟೆ ಗವರನ್ಮೆಂಟ್ ಸ್ಕೂಲಿನ ವಿದ್ಯಾರ್ಥಿಗಳ ಪೈಕಿ ಮೊದಲನೇದುವನಾಗಿ ತೇರ್ಗಡೆಯಾಗುವವನಿಗೆ ಒಂದು ಮಾಟರ್ ಬರಿ ಗಡಿಯಾರವು ಬಹುಮಾನವಾಗಿ ಕೊಡಲ್ಪಡುವದು.

ಎಲ್. ರೈಸ್,
ಎಜ್ಯುಕೇರ್ಷನ್ ಸೆಕ್ರಿಟರಿ.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 19ನೇ ಡಿಸಂಬರ್ 1888.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಲ್ಯಾಂಡ್ ರವಿನ್ಯೂ ಕೋಡಿಂಬ 1888ನೇ ಇಸವಿ IVನೇ ನಂಬರ್ ರೆಗ್ಯುಲೇಷನಿನ ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳು ಪ್ರತಿ 1ಕ್ಕೆ ಎಂದು ರೂಪಾಯಿ ಪ್ರಕಾರ ಬೆಂಗಳೂರಲ್ಲಿರತಕ್ಕ ಗವರ್ನಮೆಂಟ್ ಬುಕ್ಕು ಡಿಪೋದಲ್ಲಿ ಖರೀದಿಗೆ ದೊರೆಯುವವು.

ಯಸ್. ವೆಂಕಟವರದಯ್ಯಂಗಾರ್,
ಲೆಜಿಸ್ಲೇಟಿವ್ ಸೆಕ್ರಿಟರಿ.